ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುಟುಂಬಗಳನ್ನು ಸರಿಯಾಗಿ ಗುರುತಿಸುವುದು

586. ಶ್ರೀ ಜೆ.ಎಸ್. ಆಚಾರ್ (ಬೈಂದೂರು) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುಟುಂಬಗಳನ್ನು ಸರಿಯಾಗಿ ಗುರುತಿಸಲಾಗಿಲ್ಲವೆಂಬ ವಿಚಾರ ಅನೇಕ ಬಾರಿ ಜಿಲ್ಲಾ ಪರಿಷತ್ತಿನಲ್ಲಿ ಚರ್ಚೆತವಾಗಿದ್ದರೂ, ಹೊಸದಾಗಿ ಹಾಗೂ ಸಮರ್ಪಕವಾಗಿ ಗುರುತಿಸಲು ಕಾರ್ಯಕ್ರಮ ಕೈಗೊಳ್ಳದಿರಲು ಕಾರಣವೇನು?

ಆ) ಇದರಿಂದಾಗಿ ಕೆಲವೇ ಮಂದಿಗೆ ಪುನ: ಪುನ: ಸವಲತ್ತು ಸಿಗುತ್ತಿದ್ದು ತೀರ ಅರ್ಹರಾದವರು ಸೌಲಭ್ಯಗಳಿಂದ ವಂಚಿತರಾಗುತ್ತಿರುವುದು ನಿಜವಲ್ಲವೇ?

ಇ) ಹಾಗಿದ್ದಲ್ಲಿ, ಅದನ್ನು ಸರಿಪಡಿಸಲು ಯಾವ ರೀತಿ ಕ್ರಮ ಕೈಗೊಳ್ಳಲಾಗುವುದು.

ಶ್ರೀ. ಬಿ. ಶಿವಣ್ಣ :– (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು):–

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಬಡ ಕುಟುಂಬಗಳನ್ನು ಗುರುತಿಸುವ ಸಲುವಾಗಿ 1990ರ ಮಾರ್ಚ್ ತಿಂಗಳಲ್ಲಿ ಗ್ರಾಮೀಣ ಮಟ್ಟದಲ್ಲಿ ಆ ವರ್ಗದವರ ವ್ಯಾಪಕ ಆರ್ಥಿಕ ಸಮೀಕ್ಷೆಯನ್ನು ಮಂಡಲ ಪಂಚಾಯಿತಿ ಮುಖಾಂತರ ಮಾಡಿಸಿದ್ದು ಜಿಲ್ಲೆಯ ಗ್ರಾಮೀಣ ಪ್ರದೇಶಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಮಾಹಿತಿ ಸಂಗ್ರಹಿಸಿಡಲಾಗಿದೆ.

ಆ) ಈ ಸಮೀಕ್ಷಾ ಆಧಾರದ ಮೇಲೆ ರೂ.6,000 ರೂ.ಗಳಿಗಿಂತ ಕಡಿಮೆ ವರಮಾನ ಇರುವ ಹಾಗೂ ಸರ್ಕಾರದಿಂದ ಯಾವುದೇ ಸೌಲಭ್ಯ ಪಡೆಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಫಲಾನುಭವಿಗಳನ್ನು ಕೂಡ ಗುರುತಿಸಲಾಗಿದ್ದು ಅಂತಹ ಫಲಾನುಭವಿಗಳ ಯಾದಿಯನ್ನು ಬೇರೆ ಇಟ್ಟು ಕೊಂಡಿದೆ. ಈ ಯಾದಿಯ ಆಧಾರದ ಮೇಲೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸೌಲಭ್ಯಗಳನ್ನು ನೀಡುತ್ತಿರುವುದರಿಂದ ಯಾರಿಗೂ ಪುನ: ಪುನ: ಸೌಲಭ್ಯ ಆಗುವ ಸಂಭವ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಬಿ. ಶಿವಣ್ಣ (ಕಾನೂನು ಹಾಗೂ ಸಮಾಜ ಕಲ್ಯಾಣ ಸಚಿವರು):– ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಸಂಬಂಧಿಸಿದಂತೆ 10ನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶಿಗ್ಗಾಂವ ತಾಲ್ಲೂಕಿನ ಗಂಗೀಭಾವಿ ಸುಕ್ಷೇತ್ರ ಪ್ರವಾಸಿ ಕೇಂದ್ರ ಮಾಡುವ ಕುರಿತು

592. ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ತಾಲ್ಲೂಕು ಗಂಗೀಭಾವಿ ಸುಕ್ಷೇತ್ರವನ್ನು ಪ್ರವಾಸಿ ಅಭಿವೃದ್ಧಿ ಕೇಂದ್ರವನ್ನಾಗಿ ಪರಿಗಣಿಸಬೇಕೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಇನ್ನು ಎಷ್ಟು ದಿವಸಗಳಲ್ಲಿ ಈ ಕೆಲಸವನ್ನು ಕೈಗೊಳ್ಳಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):–